**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

C.C. No.3198/2024

CW-2 PW:2

ಸಾಕ್ಷಿಯ ಹೆಸರು ಃ ಪ್ರಕಾಶ ಕುದರಿ

ತಂದೆ /ಗಂಡನ ಹೆಸರು ಃ ಸಿದ್ದಪ್ಪ

ವಯಸ್ಸು ಃ 40 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ.

ದಿಃ 08.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ನಿಪಿ.2 ಸ್ಥಳ ಪಂಚನಾಮೆಯನ್ನು ತೋರೀಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ದಿಃ 24/08/2022 ರಂದು ಮನೋಜ ಜ್ಯುವೇಲರ್ಸ ಎಂಬ ಅಂಗಡಿಯಲ್ಲಿ ಮಾಡಿರುತ್ತೇನೆ. ಚಾಸಾ.1 ಇವರ ಅಂಗಡಿಯಲ್ಲಿ ಚೈನ್ ಕಳುವು ಆದ ವಿಷಯವಾಗಿ ಪೊಲೀಸರಿಗೆ ನಿಪಿ.2 ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ನನ್ನ ಜೊತೆ ಚಾಸಾ.1 ಮತ್ತು 2 ಸಹ ಇದ್ದರು. ಘಟನಾ ಸ್ಥಳವನ್ನು ಪೊಲೀಸರೇ ನಮಗೆ ತೋರಿಸಿರುತ್ತಾರೆ. ಪೊಲೀಸರು ಪಂಚನಾಮೆಯನ್ನು ಮದ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ಜರುಗಿಸಿ ನಿಪಿ.3 ಮತ್ತು 4 ರ ಪ್ರಕಾರ ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋದಲ್ಲಿ ನಾನು ಇದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಮನೋಜ ಜ್ಯುವೇಲರ್ಸನಲ್ಲಿ ಕೆಲಸ ಮಾಡುತ್ತೇನೆ. ಪಂಚರಾಗಲು ಬನ್ನಿ ಎಂದು ಹೇಳಿ ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ಘಟನಾ ಸ್ಥಳದ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ವೈಯ್ಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಹಾಗೂ ನನ್ನ ಮಾಲೀಕರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(ಶ್ರೀಮತಿ ದೀಪಾ ಜಿ ಮನೇರಕರ)**

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.